Date: 17.01.2025 O.S.No. 204/2022

(PW-1)

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರೆದ ಪಾಟೀಸವಾಲುಃ ಶ್ರೀ. ಎಮ್.ಬಿ.ಎನ್. ವಕೀಲರಿಂದಃ ಪ್ರತಿವಾದಿಯ ಪರಃ</u>

ನಿಪಿ-1 ಕರಾರು ಪತ್ರಕ್ಕೆ ಪ್ರತಿವಾದಿಯ ಹೆಂಡತಿ-ಮಕ್ಕಳು ಸವು ಮಾಡಿರುವುದಿಲ್ಲ ಅಂದರೆ ನಿಜ. ಅವರ ಸಹಿಗಳನ್ನು ಪಡೆಯಲು ನಮಗೆ ಯಾವುದೆ ಅಡಚಣೆ ಇರಲಿಲ್ಲ ಅಂದರೆ ನಿಜ. ದಾವೆದ ಆಸ್ತಿ ನಿಡಸೋಸಿ-ಸಂಕೇಶ್ವರ ರಸ್ತೆಗೆ ಹೊಂದಿಕೊಂಡಿದೆ ಅಂದರೆ ಸರಿಯಲ್ಲ. ಕಮತನೂರ ವ್ಯಾಪ್ತಿಯಲ್ಲಿ ದಾವೆದ ಆಸ್ತಿ ಇರುತ್ತದೆ. ಸಂಕೇಶ್ವರದಿಂದ ದಾವೆದ ಆಸ್ತಿ 2 ಕಿ.ಮೀ ದೂರದಲ್ಲಿದೆ. ದಾವೆದ ಆಸ್ತಿಗೆ ನಾನು 2019 ರಲ್ಲಿ ಹೋಗಿದ್ದೆ. ದಾವೆದ ಆಸ್ತಿಯ ಸುತ್ತ ಮುತ್ತಲು ಎನ್.ಎ. ಪ್ಲಾಟ್‌ಗಳು ಆಗಿವೆ ಎಂದರೆ ನನಗೆ ಗೊತ್ತಿಲ್ಲ. ದಾವೆದ ಆಸ್ತಿಗೆ ನೀರಾವರಿ ಪೈಪಲೈನ್ ಇದೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗೆ ಹಣ ಕೊಟ್ಟಿದ್ದೇನೆ ಅಂತ ಹೇಳುವ ಕಾಲದ ನನ್ನ ಬ್ಯಾಂಕ್ ಖಾತೆಯ ಸ್ಟೇಟಮೆಂಟ್ ಹಾಜರು ಪಡಿಸಿಲ್ಲ. ನಾನು ಲೇವಾದೇವಿ ವ್ಯವಹಾರ ಮಾಡುತ್ತಿದ್ದು, ಪ್ರತಿವಾದಿಗೆ ಬಡ್ಡಿ ಆಧಾರದಲ್ಲಿ ಹಣ ಕೊಟ್ಟಿದ್ದು, ಸದರಿ ಹಣ ಎಲ್ಲ ಅವರು ನನಗೆ ಮರು ಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವೆದ ಆಸ್ತಿಗೆ ಕೆಲ ಭಾಗವನ್ನು ಮಾರಾಟ ಮಾಡಿ ಪ್ರತಿವಾದಿ ನನಗೆ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ಶ್ರೀಕಾಂತ ಜಾಧವ, ವಿಜಯ ಗೋಟ್, ಅಣ್ಣಪ್ಪ ಕುಂಬಾರ, ಸಂದೀಪ ಕದಮ್, ವೈಶಾಲಿ ನಿಂಬಾಳ್ಕರ, ಪ್ರಕಾಶ ಕೊಕಟನೂರ ಮತ್ತು ಸುವರ್ಣ ಪಾಟೀಲ ಇವರಿಗೆ ದಾವೆದ ಆಸ್ತಿ ಸ್ವಲ್ಪ ಮಾರಾಟ ಮಾಡಿ, ಅದರ ಹಣ ನನಗೆ ಕೊಟ್ಟಿದ್ದಾರೆ ಅಂದರೆ ಸರಿಯಲ್ಲ. ಪ್ರತಿವಾದಿ ಅವರಿಗೆ ಮಾರಾಟ ಮಾಡಿದ ಜಮೀನು ಪ್ರತಿ ಗುಂಟೆಗೆ ರೂ.2,80,000/- ಇದ್ದು, ಮಾರಾಟ ಮಾಡಿ ನನ್ನ ಹಣ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ದಾವೆದ ಆಸ್ತಿ ಪ್ರತಿ ಎಕರೆಗೆ 60-70 ಲಕ್ಷ ರೂ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ.

Date: 17.01.2025 O.S.No. 204/2022

(PW-1)

ಪ್ರತಿವಾದಿ ಮತ್ತು ಆತನ ವಾರಸುದಾರರು ದಿಃ 25.03.2022 ರಂದು ನಾನು ಸುಳ್ಳು ಕರಾರು ಪತ್ರ ಹುಟ್ಟಿಸಿಕೊಂಡಿದ್ದೇನೆ ಅಂತ ಸಂಕೇಶ್ವರ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಅಂದರೆ ಸಾಕ್ಷಿ ಕರಾರು ಪತ್ರದ ಪ್ರಕಾರ ಖರೀದಿ ಪತ್ರ ಮಾಡಿಕೊಡುವಂತೆ ಪ್ರತಿವಾದಿಯನ್ನು ಕೇಳಿದ್ದರಿಂದ ಆತ ನನ್ನ ವಿರುದ್ಧ ಸುಳ್ಳು ಕೇಸು ಮಾಡಿದ್ದ ಅಂತ ಹೇಳುತ್ತಾರೆ. ಪೋಲಿಸ್ ಠಾಣೆಯಲ್ಲಿ ಪ್ರತಿವಾದಿಯರಿಗೆ ನಾನು ಯಾವುದೇ ಹಣ ಕೊಟ್ಟಿಲ್ಲ ಅಂತ ಬರೆದುಕೊಟ್ಟಿದ್ದೇನೆ ಅಂದರೆ ಸಾಕ್ಷಿ, ನಮ್ಮ ವ್ಯಾಜ್ಯ ಸಿವಿಲ್ ಸ್ವರೂಪದ ವ್ಯಾಜ್ಯ ಇರುವುದರಿಂದ ಕೋರ್ಟಿಗೆ ಹೋಗಲು ಪೋಲಿಸರು ತಿಳಿಸಿದ್ದರು ಅಂತ ಹೇಳುತ್ತಾರೆ. ಪ್ರತಿವಾದಿಗೆ ನಾನು ಯಾವುದೆ ಹಣ ಕೊಡದೆ ಸುಳ್ಳು ಕರಾರು ಪತ್ರ ಹುಟ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ದಾವೆದ ಆಸ್ತಿ ಹೊರತು ಪಡಿಸಿ, ಬೇರೆ ಜಮೀನು ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯ ಹೆಸರಿನಲ್ಲಿ ಬೇರೆ 11 ಗಂಟೆ ಜಮೀನು ಇದೆ, ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ 11 ಗುಂಟೆ ಜಮೀನು ಅಂಕಲಿ ಗ್ರಾಮದ ಹದ್ದಿಯಲ್ಲಿ ಇರುತ್ತದೆ. ದಾವೆದ ಆಸ್ತಿ ಬೆಲೆ ಬಾಳುವ ಆಸ್ತಿ ಇದ್ದು, ಅದನ್ನು ಎತ್ತಿ ಹಾಕುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ಸುಳ್ಳು ಕೇಸು ಮಾಡಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಯಾವುದೇ ರೀತಿ ಹಣದ ಅಡಚಣೆ ಇರಲಿಲ್ಲ ಅಂದರೆ ಸರಿಯಲ್ಲ. ನಾನು, ಸಾಕ್ಷಿದಾರರು ಮತ್ತು ಪತ್ರ ಬರಹಗಾರರು ಮೀಲಾಫಿಯಾಗಿ ಸುಳ್ಳು ಕರಾರು ಪತ್ರ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಕೇಸು ಹಾಕಿ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

Date: 17.01.2025 O.S.No. 204/2022

(PW–1)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/– 17.01.25

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ